*Tumbe Group of International Journals*
*Vol. 6, Issue No. 1, pp.79-83, January-April 2023* **ISSN: 2581-8511**

# Taxation in Vachanas.

**Shivakumar R**[1]

[1] Kannada Assistant Professor, Hindustan College, J.P. Nagara, Mysore

**Abstract**

Honest workers' pay taxes. Dishonest people cheat the state by not paid taxes. Such tax evading minds need to read the verses of Sharana. The state treasury was full because all those who surrendered lived honestly. The Sharanas who lived on the path of truth laid down by Basavanna were wary of taxes. By this, he has become a role model for the people of the present society.

**Keywords**: Sunka, Kakhlananya, Raitha, Kanaj, Negilu, Basavanna, Jedara Dasimaiah, Sivalenka Manchanna.

# ವಚನಗಳಲ್ಲಿ ಸುಂಕದ ವಿಚಾರ.

**ಡಾ. ಶಿವಕುಮಾರ್ ಆರ್** [1]

[1]ಕನ್ನಡ ಸಹಾಯಕ ಪ್ರಾಧ್ಯಾಪಕರು, ಹಿಂದೂಸ್ತಾನ್ ಕಾಲೇಜು, ಜೆ.ಪಿ. ನಗರ, ಮೈಸೂರು

**ಪ್ರಸ್ತಾವನೆ**:

ಪ್ರಾಮಾಣಿಕವಾಗಿ ದುಡಿಯುವವರು ಸುಂಕವನ್ನು ಕಟ್ಟುತ್ತಾರೆ. ಅಪ್ರಾಮಾಣಿಕರು ಸುಂಕ ನೀಡದೆ ರಾಜ್ಯಕ್ಕೆ ವಂಚನೆಯನ್ನೆಸಗುತ್ತಾರೆ. ಈ ರೀತಿಯ ತೆರಿಗೆ ವಂಚಿಸುವ ಮನಸ್ಸುಗಳಿಗೆ ಶರಣರ ವಚನಗಳ ಓದು ಅಗತ್ಯವಾಗಿದೆ. ಶರಣರೆಲ್ಲರೂ ಕಾಯಕಜೀವಿಗಳಾಗಿ ಬದುಕಿದ್ದರಿಂದ ರಾಜ್ಯದ ಬೊಕ್ಕಸಕ್ಕೆ ಯಾವಕುಂದೂ ಇರಲಿಲ್ಲ. ಬಸವಣ್ಣನವರು ಹಾಕಿಕೊಟ್ಟ ಸತ್ಯಮಾರ್ಗದಲ್ಲಿ ಬದುಕಿದ ಶರಣರು ಸುಂಕದ ವಿಚಾರದಲ್ಲಿ ಜಾಗರೂಕರಾಗಿದ್ದರು. ಈ ಮೂಲಕ ಪ್ರಸ್ತುತ ಸಮಾಜದ ಜನರಿಗೆ ಮಾದರಿಯಾಗಿದ್ದಾರೆ.

**ಪ್ರಮುಖ ಪದಗಳು:** ಸುಂಕ, ಕಳ್ಳನಾಣ್ಯ, ರೈತ, ಕಣಜ, ನೇಗಿಲು, ಬಸವಣ್ಣ, ಜೇಡರ ಸಿಮಯ್ಯ, ಶಿವಲೆಂಕ ಮಂಚಣ್ಣ,

## ಪೀಠಿಕೆ

ಒಂದು ರಾಜ್ಯದ ಬೊಕ್ಕಸ ಸುಂಕವನ್ನು ಅವಲಂಭಿಸಿರುತ್ತದೆ. ವಸ್ತು, ಸೇವೆ, ವ್ಯವಹಾರಗಳ ಮೇಲೆ ಸುಂಕವನ್ನು ವಿಧಿಸಲಾಗುತ್ತದೆ. ಇದನ್ನು ತೆರಿಗೆ, ಕಂದಾಯ ಎಂಬ ಹೆಸರುಗಳಿಂದಲೂ ಕರೆಯುತ್ತೇವೆ. ಇಂಗ್ಲಿಷ್‌ನಲ್ಲಿ ಸುಂಕಕ್ಕೆ ಸಂವಾದಿಯಾಗಿ 'ಟ್ಯಾಕ್ಸ್' ಪದ ಬಳಕೆಯಲ್ಲಿದೆ.

Taxes are mandatory contributions lived on individuals or corporations by a government entity ಎಂದು ಹೇಳಲಾಗುತ್ತದೆ. ಅಂದರೆ ಸರ್ಕಾರಿ ಘಟಕದಿಂದ ವ್ಯಕ್ತಿಗಳು ಅಥವಾ ನಿಯಮಗಳ ಮೇಲೆ ವಿಧಿಸುವ ಕಡ್ಡಾಯ ಕೊಡುಗೆಗಳೇ ತೆರಿಗೆಗಳು. ಈ ತೆರಿಗೆ ವಿಧಿಸುವ ಪದ್ಧತಿ ರಾಜಪ್ರಭುತ್ವದ ಕಾಲದಿಂದಲೂ ರೂಢಿಯಲ್ಲಿದೆ. ಇದು ಕೇವಲ ಭಾರತದಲ್ಲಿ ಮಾತ್ರವಲ್ಲದೇ ಪ್ರಪಂಚದಾದ್ಯAತ ಅಸ್ತಿತ್ವದಲ್ಲಿದೆ.

ಪ್ರಸ್ತುತ ಮನುಷ್ಯರ ಆದಾಯ ಮೂಲಗಳು ಹೆಚ್ಚಾದಂತೆ ತೆರಿಗೆಗಳು ಹೆಚ್ಚಾಗಿವೆ. ಭಾರತ ಸರ್ಕಾರವು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ತೆರಿಗೆಯನ್ನು ವಸೂಲು ಮಾಡುತ್ತದೆ. ಆದಾಯ, ಕಂಪನಿ, ಸಂಪತ್ತು, ಉಡುಗೊರೆ, ಹಕ್ಕುದಾರಿಕೆ, ಬಡ್ಡಿ, ಭತ್ಯೆ, ಬ್ಯಾಂಕು ನಗದು, ವ್ಯವಹಾರದ ಮೇಲಿನ ತೆರಿಗೆ ನೇರತೆರಿಗೆಯಾಗಿದೆ. ಕೇಂದ್ರ ಅಬಕಾರಿ, ಕಸ್ಟಂಸ್, ಸೇವಾ ತೆರಿಗೆಗಳು ಪರೋಕ್ಷ ತೆರಿಗೆಗಳಾಗಿವೆ. ಇದಕ್ಕೆಲ್ಲಾ ಅಂತಿಮವಾಗಿ ಬೆಲೆ ತೆರಬೇಕಾದವರು ಗ್ರಾಹಕ ಅಥವಾ ಜನಸಾಮಾನ್ಯರು ಎಂಬುದAತೂ ಸತ್ಯ

ಬಡವರನ್ನು, ನಿರ್ಗತಿಕರನ್ನು ಹಿಂಸಿಸಿ ಒತ್ತಾಯಪೂರ್ವಕವಾಗಿ ವಸೂಲಿ ಮಾಡುವುದು ತೆರಿಗೆ ಎಂದು ಕರೆಸಿಕೊಳ್ಳುವುದಿಲ್ಲ. ರಾಜಪ್ರಭುತ್ವದ ಸಂದರ್ಭದಲ್ಲಿ ರಾಜರು ಯುದ್ಧದ ಕಾರಣಕ್ಕಾಗಿಯೋ ಅಥವಾ ಐಷಾರಾಮಿ ಬದುಕಿನ ನಿರ್ವಹಣೆಗಾಗಿಯೋ ಒತ್ತಾಯಪೂರ್ವಕವಾಗಿ ತೆರಿಗೆ ವಸೂಲಿ ಮಾಡುತ್ತಿದ್ದರು. ಇನ್ನು ಕೆಲವರು ಜಾತಿ, ವರ್ಗಗಳ ಆಧಾರದ ಮೇಲೆಯೂ ತೆರಿಗೆಯನ್ನು ವಿಧಿಸುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ಉಳ್ಳವರು, ಉತ್ತಮ ಜಾತಿ ಅಥವಾ ಉತ್ತಮ ವರ್ಗದವರೆಂಬ ಕಾರಣಕ್ಕೆ ತೆರಿಗೆ ವಿನಾಯಿತಿ ಪಡೆಯುತ್ತಿದ್ದರು. ಇಲ್ಲದವರು ಕೆಳಜಾತಿ ಎಂಬ ಕಾರಣಕ್ಕೆ ತೆರಿಗೆ ಶೋಷಣೆಯನ್ನು ಅನುಭವಿಸುತ್ತಿದ್ದರು. ಆದರೆ ರಾಜಪ್ರಭುತ್ವದಲ್ಲಿ ಬದುಕಿದ್ದ ಭಕ್ತಿಭಂಡಾರಿ ಬಸವಣ್ಣನವರು ಸರ್ವರ ಹಿತ ರಕ್ಷಣೆಯ ದೃಷ್ಟಿಯಲ್ಲಿ ತೆರಿಗೆಯನ್ನು ಪಡೆಯುವ ಮೂಲಕ ಬಿಜ್ಜಳನ ಭಂಡಾರವನ್ನು ತುಂಬಿದರು.

ಬಸವಣ್ಣನವರು ಜನರಲ್ಲಿ ಕಾಯಕಪ್ರಜ್ಞೆಯನ್ನು ಪ್ರೋತ್ಸಾಹಿಸಿ ವೃತ್ತಿಗೌರವ ಹಾಗೂ ವೃತ್ತಿ ಸಮಾನತೆಯನ್ನು ಬೆಳೆಸಿದರು. ಪ್ರತಿಯೊಬ್ಬರು ದುಡಿದು ತಮ್ಮ ಹಸಿವನ್ನು ತಾವೇ ನೀಗಿಸಿಕೊಂಡು ದಾಸೋಹದ ಮೂಲಕ ಪರರ ಹಸಿವನ್ನೂ ನೀಗಿಸಿದರು. ಕಾಲಕಾಲಕ್ಕೆ ರಾಜ್ಯದ ತೆರಿಗೆಯನ್ನು ಸಂದಾಯ ಮಾಡಿದರು. ಇದಕ್ಕೆ ಬಸವಣ್ಣನವರೇ ಸ್ಪೂರ್ತಿಯಾಗಿದ್ದರು. ಅವರು,

"ಭಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ ಹೋಗಬಾರದು.
ಕಳ್ಳನಾಣ್ಯ ಸಲುಗೆಗೆ ಸಲ್ಲದು,
ಕಳ್ಳನಾಣ್ಯವ ಸಲಲೀಯರಯ್ಯಾ.
ಭಕ್ತಿಯೆಂಬ ಭಂಡಕ್ಕೆ ಜಂಗಮವೆ ಸುಂಕಿಗ ಕೂಡಲಸಂಗಮದೇವಾ."

ಎನ್ನುವ ಮೂಲಕ ಅಗತ್ಯವನ್ನು ಮೀರಿದ ಸಂಪತ್ತು ಅಪರಾಧ ಎಂದು ಸಾರಿದರು. ಕಾಯಕದಿಂದ ಬಂದ ಅಗತ್ಯಕ್ಕಿಂತ ಹೆಚ್ಚಿನ ಸಂಪತ್ತನ್ನು ಸುಂಕವಾಗಿ ಕೊಡಬೇಕೆಂದಿದ್ದಾರೆ. ಇಲ್ಲಿನ ಸುಂಕವನ್ನು ಎರಡು ರೀತಿಯಲ್ಲಿ ಅರ್ಥೈಸಿಕೊಳ್ಳಬಹುದು. ಮೊದಲನೆಯದ್ದು

Tumbe Group of International Journals
Vol. 6, Issue No. 1, pp.79-83, January-April 2023 ISSN: 2581-8511

ಅಗತ್ಯಕ್ಕಿಂತ ಹೆಚ್ಚಿನ ಆದಾಯವನ್ನು ಸುಂಕದ ರೂಪದಲ್ಲಿ ರಾಜ್ಯಕ್ಕೆ ಸಲ್ಲಿಸಬೇಕು ಎಂಬರ್ಥವಾದರೆ, ಎರಡನೆಯದು ಅಗತ್ಯಕ್ಕಿಂತ ಹೆಚ್ಚಿನ ಸಂಪತ್ತನ್ನು ದಾಸೋಹದ ರೂಪದಲ್ಲಿ ಹಂಚಬೇಕು ಎಂಬ ಅರ್ಥವನ್ನು ಧ್ವನಿಸುತ್ತದೆ. ಈ ಎರಡೂ ಸಂಪತ್ತಿನ ವಿಕೇಂದ್ರೀಕರಣದ ನಿಯಮವನ್ನೇ ಪ್ರತಿಪಾದಿಸುತ್ತಿರುವುದಂತೂ ಸತ್ಯ. ಕಪ್ಪುಹಣವನ್ನು ಬಸವಣ್ಣನವರು ಕಳ್ಳನಾಣ್ಯ ಎಂದು ಕರೆದು ಅದರ ನಿಷ್ಪ್ರಯೋಜಕತೆಯನ್ನು ಎತ್ತಿಹಿಡಿದಿದ್ದಾರೆ.

ಪ್ರಸ್ತುತ ಭ್ರಷ್ಟಾಚಾರಿಗಳು ಸುಂಕದಿಂದ ತಪ್ಪಿಸಿಕೊಳ್ಳಲು ನಾನಾ ದಾರಿಗಳನ್ನು ಹುಡುಕುತ್ತಾರೆ. ಬೇನಾಮಿ ಆಸ್ತಿ ಮಾಡಿ ಕಳ್ಳಬೆಕ್ಕಿನಂತೆ ಅದನ್ನು ಅನುಭವಿಸುತ್ತಿರುತ್ತಾರೆ. ಕೆಲವರಿಗೆ ಈ ಸತ್ಯ ತಿಳಿದಿದ್ದರೂ ತಿಳಿಯದವರಂತೆ ವರ್ತಿಸುತ್ತಾರೆ. ತಮಗೆ ಅದರಿಂದ ಯಾವ ಲಾಭವೂ ಇಲ್ಲವೆಂಬುದೇ ಇದಕ್ಕೆ ಮುಖ್ಯ ಕಾರಣ. ಇಂಥಾ ಭ್ರಷ್ಟಾಚಾರಿಗಳ ಬದುಕನ್ನು ನೋಡಿದರೆ ಜೇಡರ ದಾಸಿಮಯ್ಯನವರ,

"ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ.
ಇರುಳೆಲ್ಲಾ ನಡೆದನಾ ಸುಂಕಕಂಜಿ.
ಕಳವೆಯೆಲ್ಲಾ ಹೋಗಿ ಬರಿಗೋಣಿ ಉಳಿಯಿತ್ತು!
ಅಳಿಮನದವನ ಭಕ್ತಿ ಇಂತಾಯಿತ್ತು! ರಾಮನಾಥ."

ಎಂಬ ವಚನ ನೆನಪಿಗೆ ಬರುತ್ತದೆ. ಭ್ರಷ್ಟಾಚಾರಿಗಳ ಜೀವನಕ್ರಮವು ಹರಿದ ಗೋಣಿಯಂತೆ ನಿಷ್ಪ್ರಯೋಜಕ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳದ ಹೊರತು ನಮ್ಮಲ್ಲಿ ಸ್ವಯಂಜಾಗೃತಿ ಮೂಡುವುದಿಲ್ಲ. ಶರಣರು ವ್ಯಷ್ಟಿ ಜಾಗೃತಿಯ ಜೊತೆಗೆ ಸಮಷ್ಟಿ ಜಾಗೃತಿಯನ್ನೂ ಮೂಡಿಸಿದರು. ನಮ್ಮ ಕಾಯಕದಿಂದ ಬಂದ ಪ್ರತಿಫಲ ಅವಶ್ಯಕತೆಗಿಂತ ಹೆಚ್ಚಿನದ್ದಾದರೆ ದಾಸೋಹ ರೂಪದಲ್ಲಿ ವಿನಿಯೋಗ ಮಾಡುವ ಅಥವಾ ಸುಂಕದ ರೂಪದಲ್ಲಿ ರಾಜ್ಯದ ಅಭಿವೃದ್ಧಿಗೆ ವಿನಿಯೋಗಿಸುವ ಕೆಲಸ ಮಾಡಬೇಕು. ಅದನ್ನು ಬಚ್ಚಿಡುವ, ಅತಿಯಾಸೆಯನ್ನು ಮೈಗೂಡಿಸಿಕೊಳ್ಳುವ ಪ್ರವೃತ್ತಿ ಬೆಳೆದರೆ ಅದು ನಿಷ್ಪ್ರಯೋಜಕವಾಗುತ್ತದೆ ಹೊರತು ಪ್ರಯೋಜನಕ್ಕೆ ಬರುವುದಿಲ್ಲ. ಎಷ್ಟೋ ಜನ ಅತಿಯಾದ ಹಣ, ಆಸ್ತಿ ಹೊಂದಿದ್ದರೂ ನೆಮ್ಮದಿಯಿಂದ ಬದುಕಲು ಸಾಧ್ಯವಾಗದೆ ಆತ್ಮಹತ್ಯೆ ಮಾಡಿಕೊಂಡಿರುವ ಉದಾಹರಣೆಗಳು ನಮಗೆ ಕಾಣಸಿಗುತ್ತವೆ. ನಾನು, ನನ್ನದು, ನನಗಾಗಿ ಎಂದು ಸ್ವಾರ್ಥ ಮನೋಭಾವದಿಂದ ಪೂಜಿಸುವವರು ಕೊನೆಗೆ ಎಲ್ಲವನ್ನೂ ಕಳೆದುಕೊಂಡು ಅನಾಥ ಭಾವದಲ್ಲಿ ನಿಲ್ಲಬೇಕಾಗುತ್ತದೆ ಎಂಬ ಮಾರ್ಮಿಕ ಸಂದೇಶ ಇದರಲ್ಲಿ ಅಡಗಿದೆ.

ನಮ್ಮ ದೇಶದ ಬೆನ್ನೆಲುಬು ರೈತ ಎಂಬುದು ಲೋಕವಿದಿತ. ರೈತರ ಪಾಲಿಗೆ ಭೂಮಿಯೇ ಆಧಾರ. ಉಳುಮೆ ಮಾಡಿ ಬೆಳೆ ಬೆಳೆದು ತಾವೂ ಬದುಕಿ ಇತರರನ್ನೂ ಬದುಕಿಸುವ ಅನ್ನದಾತರು. ಅವರ ಉಳುಮೆಗೆ ಬಹುಮುಖ್ಯವಾಗಿ ಬೇಕಾದ ಪರಿಕರ ಎತ್ತುಗಳು ಮತ್ತು ನೇಗಿಲು. ಇವುಗಳೊಂದಿಗೆ ರೈತರು ಆರಾಧನಾ ಭಾವವನ್ನು ಹೊಂದಿರುತ್ತಾರೆ. ಇವುಗಳಲ್ಲಿ ನೇಗಿಲು ಇಲ್ಲದೆ ಉಳುಮೆ ಮಾಡುವ, ಬೆಳೆ ಬೆಳೆಯುವ, ಹಸಿವು ನೀಗಿಸುವ, ಸುಂಕ ಕಟ್ಟುವ ಅವಕಾಶವೇ ಇಲ್ಲ. ನೇಗಿಲು ಜಡವಾದಂತೆ ರೈತನ ಬದುಕೂ ಜಡವಾಗುತ್ತದೆ. ಹೀಗಿದ್ದಾಗ ಆತನಿಂದ ಸುಂಕ ವಸೂಲಿ ಮಾಡುವುದು ಅಮಾನವೀಯವಾಗುತ್ತದೆ. ಅದನ್ನೇ ಶಿವಲೆಂಕ

ಮಂಚಣ್ಣನವರು "ಹೇರನೊಪ್ಪಿಸಿದವಂಗೆ ಸುಂಕವ ಬೇಡಿ ಗಾರುಮಾಡಲೇತಕ್ಕೆ?" ಎಂದು ಪ್ರಶ್ನಿಸುತ್ತಾರೆ. ಸುಂಕದ ಕರಾಳತೆಗೆ ಸಿಲುಕಿ ರೈತರು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವಂಥ ಸ್ಥಿತಿ ತಲುಪುವುದೆಂದರೆ, ಆ ರಾಜ್ಯ ಅರಾಜಕತೆಗೆ ಒಳಗಾಗಿದೆ ಎಂದರ್ಥ. ಇಂಥ ರಾಜ್ಯವನ್ನು ಸುಖೀರಾಜ್ಯವನ್ನಾಗಿ ಮಾಡಬೇಕಾದರೆ, ರೈತರ ಮುಖದಲ್ಲಿ ಮಂದಹಾಸ ಮೂಡಬೇಕು. ರೈತರು ಹೇರನ್ನು ಒಪ್ಪಿಸದೆ, ಕಟ್ಟುವ ಕೆಲಸದಲ್ಲಿ ತೊಡಗಬೇಕು. ಆ ರೀತಿ ಮಾಡುವ ಅವಕಾಶ ರಾಜ ಅಥವಾ ರಾಜ್ಯಕ್ಕಿರುತ್ತದೆ.

ಪ್ರಸ್ತುತ ನಮ್ಮ ಸಮಾಜದಲ್ಲಿ ರೈತರ ಆತ್ಮಹತ್ಯೆಗಳು ಹೆಚ್ಚಾಗುತ್ತಿವೆ. ಇದಕ್ಕೆ ನಾನಾ ಕಾರಣಗಳಿವೆ. ರೈತರು ಕಡುಬಡತನಕ್ಕೆ ತುತ್ತಾಗಬಾರದೆಂಬ ಅನಿವಾರ್ಯತೆಯಿಂದ ಆರಂಬ ಅಥವಾ ವ್ಯವಸಾಯ ಮಾಡುತ್ತಿದ್ದಾರೆ. ಶ್ರೀಮಂತರಾಗುವ ಯಾವ ಲಾಭವೂ ಅವರಲ್ಲಿ ಉಳಿದಿಲ್ಲ. ಅದು ಅವರ ಪಾಲಿಗೆ ಸ್ವಾಭಿಮಾನದ ಸಂಕೇತವಾಗಿದೆ. ಆದರೆ ಸರ್ಕಾರದ ಯೋಜನೆಗಳು ರೈತರಿಗೆ ಸರಿಯಾಗಿ ತಲುಪದ ಕಾರಣ ಸಾಲದ ಸುಳಿಗೆ ಸಿಲುಕಿ ನರಳುವಂತಾಗಿದೆ. ಅವರ ಸ್ವಾಭಿಮಾನಕ್ಕೆ ಕೊಡಲಿಪೆಟ್ಟು ಬೀಳುತ್ತಿದೆ. ಆ ಕಾರಣಕ್ಕೆ ಆತ್ಮಹತ್ಯೆಗಳು ಹೆಚ್ಚಾಗಿ ಕುಟುಂಬಗಳು ಅನಾಥವಾಗಿವೆ. ರೈತರು ಮಾಡುವ ಯಾವ ಕೆಲಸಕ್ಕೂ ಮಾರುವ ಯಾವ ವಸ್ತುವಿಗೂ ಸೂಕ್ತ ಬೆಲೆಯಿಲ್ಲ. ಆದರೆ ರೈತರು ಕೊಳ್ಳುವ ಎಲ್ಲಾ ವಸ್ತುಗಳಿಗೂ ಸುಂಕಸಹಿತ ಬೆಲೆ ನಿಗದಿಯಾಗಿರುತ್ತದೆ. ಈ ರೀತಿ ಇದ್ದಾಗ ರೈತರು ತಮ್ಮ ಬದುಕನ್ನು ಕಟ್ಟಿಕೊಳ್ಳುವುದು ಕಷ್ಟ. ಇದರ ಜೊತೆಗೆ ಸುಂಕ ಕಟ್ಟಲು ಹೇಗೆ ಸಾಧ್ಯ ಎಂಬ ವಾಸ್ತವ ಸತ್ಯದ ಬಗ್ಗೆ ಚಿಂತಿಸಬೇಕಿದೆ. ಸರ್ಕಾರಗಳು ದೇಶದ ಬೆನ್ನೆಲುಬನ್ನು ಬಿಲ್ಲಿನಂತೆ ಬಗ್ಗಿಸುವ ಬದಲು, ಧ್ವಜಸ್ತಂಭದಂತೆ ಸ್ಥಿರ ಹಾಗೂ ನೇರಗೊಳಿಸಬೇಕಾದ ಅನಿವಾರ್ಯತೆಯಿದೆ.

ಪ್ರಸ್ತುತ ನಮ್ಮ ಸಮಾಜದಲ್ಲಿ ಬೆಲೆಯೇರಿಕೆ ಹೆಚ್ಚಾಗಿ ಹಣದ ಅಪಮೌಲ್ಯ ಉಂಟಾಗುತ್ತಿದೆ. ವಿಶ್ವಮಟ್ಟದಲ್ಲಿ ಭಾರತದ ರೂಪಾಯಿಯ ಮೌಲ್ಯ ಕ್ಷೀಣಿಸಿದೆ. ಆಣೆ, ಪೈಸೆಗಳು ಇತಿಹಾಸದ ಪುಟ ಸೇರಿವೆ. ಈಗ ಒಂದು ರೂಪಾಯಿಯೂ ಅದೇ ಹಾದಿ ಹಿಡಿಯುತ್ತಿದೆ. ಹತ್ತು ರೂಪಾಯಿಗಿದ್ದ ಕಿಮ್ಮತ್ತು ಇಂದು ನೂರು ರೂಪಾಯಿಗೆ ಇಲ್ಲವಾಗಿದೆ. ಜನಸಾಮಾನ್ಯರು ಪ್ರತ್ಯಕ್ಷವಾಗಿ ತೆರಿಗೆ ಕಟ್ಟುತ್ತಿರುವುದಕ್ಕಿಂತ ಪರೋಕ್ಷವಾಗಿ ತೆರಿಗೆ ಕಟ್ಟುತ್ತಿರುವುದೇ ಹೆಚ್ಚು. ಜನಸಂಖ್ಯೆಗೆ ತಕ್ಕ ಉದ್ಯೋಗ ದೊರಕದೆ ನಿರುದ್ಯೋಗ ಸಮಸ್ಯೆ ಎದುರಾಗುತ್ತಿದೆ. ಅಲ್ಲದೆ ದಿನಬಳಕೆ ವಸ್ತುಗಳ ಬೆಲೆ ಏರಿಕೆಯಾಗುತ್ತಲೇ ಇದೆ. ಕಪ್ಪು ಹಣವನ್ನು ತರುವ ಛಲ ಯಾರಿಗೂ ಇದ್ದಂತೆ ತೋರುವುದಿಲ್ಲ. ಆದರೆ ಜನರಿಂದ ತೆರಿಗೆ ವಸೂಲಿ ಮಾಡಲು ಮಾತ್ರ ಎಲ್ಲರೂ ನಿಷ್ಣಾತರು ಎಂಬುದನ್ನು ಅಲ್ಲಗಳೆಯುವಂತಿಲ್ಲ. ಬಸವಣ್ಣನವರು, "ಕಣಜ ತುಂಬಿದ ಬಳಿಕ ಸುಂಕವ ಕಟ್ಟಬೇಕು" ಎಂಬ ಮಾನವೀಯ ಧೋರಣೆಯನ್ನು ವ್ಯಕ್ತಪಡಿಸುತ್ತಾರೆ. ಈ ಕಣಜ ಕೇವಲ ದವಸ ಧಾನ್ಯದ ಸಂಕೇತವಲ್ಲ ಜನರ ಮೂಲಭೂತ ಸೌಕರ್ಯದ ಸಂಕೇತವೂ ಹೌದು. ಇಂಥ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಎಡವಿದ್ದರೂ ತೆರಿಗೆ ವಿಧಿಸಲು ಮಾತ್ರ ಜಿಂಕೆಯಂತೆ ಓಡುವುದು ನಮ್ಮನ್ನಾಳುವವರ ಸ್ವಭಾವವಾಗಿದೆ. ಈ ಬಗೆಯ ವರ್ತನೆ ಬದಲಾಗಬೇಕು. ತೆರಿಗೆ ಕಟ್ಟುವ ಮತ್ತು ವಸೂಲು ಮಾಡುವವರಿಬ್ಬರಲ್ಲೂ ಬದಲಾವಣೆಯಾಗಬೇಕು.

Tumbe Group of International Journals
Vol. 6, Issue No. 1, pp.79-83, January-April 2023 ISSN: 2581-8511

1325ರಲ್ಲಿ ಬದುಕಿದ್ದ ಮಹ್ಮದ್ ಬಿನ್ ತುಘಲಕ್, ದೋಹಬ್ ಪ್ರಾಂತ್ಯದಲ್ಲಿ ಕ್ಷಾಮ (ಬರಗಾಲ) ಎದುರಾಗಿರುವುದನ್ನೂ ಲೆಕ್ಕಿಸದೆ ಭೂಕಂದಾಯವನ್ನು ಒಳಗೊಂಡಂತೆ ಮತ್ತಿತರ ತೆರಿಗೆಗಳನ್ನು ಹೆಚ್ಚಿಸುತ್ತಾನೆ. ಇದರಿಂದ ಅಲ್ಲಿನ ಜನ ಕಂಗಾಲಾಗುತ್ತಾರೆ. "ಸುಲ್ತಾನನು ಶೇಕಡ 5 ರಿಂದ 10 ಭಾಗ ಕಂದಾಯವನ್ನು ಹೆಚ್ಚಿಸಿದನು. ಭೂಕಂದಾಯದ ಹೆಚ್ಚಳಕ್ಕಿಂತ ಮನೆ ಕಂದಾಯ ಮತ್ತು ಗೋಮಾಳದ ತೆರಿಗೆಗಳೇ ಹೆಚ್ಚಿದ್ದವು" ಎಂಬ ಎ ಎಲ್ ಶ್ರೀವಾಸ್ತವರವರ ಮಾತನ್ನು ಇಲ್ಲಿ ನೆನೆಯುವುದು ಸೂಕ್ತ ಎನಿಸುತ್ತದೆ. ಇದು ರಾಜಪ್ರಭುತ್ವದ ಸುಂಕ ಶೋಷಣೆಯಾಗಿದೆ. ಈ ಸಂದರ್ಭದಲ್ಲಿ ಬ್ರಿಟಿಷ್ ಆಳ್ವಿಕೆಯಲ್ಲಿ ನಡೆದ ತೆರಿಗೆ ಶೋಷಣೆಯನ್ನೂ ನೆನೆಯಬೇಕಾದ ಅಗತ್ಯವಿದೆ. ಮಹಾರಾಷ್ಟ್ರದ ರೈತರ ದಂಗೆ 1857, ಬಂಗಾಳದ ನೀಲಿ ಬೆಳೆಗಾರರ ಚಳವಳಿ (ಇಂಡಿಗೋ ಚಳವಳಿ) 1864, ಮಾಪಿಳ್ಳೆ ದಂಗೆ 1921, ಚಂಪಾರಣ್ಯ ಮತ್ತು ಖೈಡಾ ಚಳವಳಿಗಳು ಕಂದಾಯದ ಕರಾಳತೆಯನ್ನು ನಮಗೆ ತೋರಿಸಿಕೊಟ್ಟಿವೆ.

## ತೀರ್ಮಾನ

ಹೀಗೆ ರೈತರ ಮೇಲೆ ಅಧಿಕ ತೆರಿಗೆ ವಿಧಿಸುವ, ಅವರನ್ನು ಸಂಕಷ್ಟಕ್ಕೆ ಈಡು ಮಾಡುವ ಕೆಲಸ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಶಿವಲೆಂಕ ಮಂಚಣ್ಣನವರ ಮಾತನ್ನೇ ರಾಘವಾಂಕ ತನ್ನ ಹರಿಶ್ಚಂದ್ರ ಕಾವ್ಯದಲ್ಲಿ "ಹೇರನೊಪ್ಪಿಸಿದವಂಗೆ ಸುಂಕವೆಲ್ಲಿಯದು?" ಎಂದು ಉಲ್ಲೇಖಿಸುತ್ತಾನೆ. ಇದೊಂದು ಜನಪದರ ಗಾದೆಯಾಗಿರಲೂಬಹುದು. ಇಂಥ ವಾಸ್ತವದ ಮಾತುಗಳಿಂದ ಶರಣರು ಪ್ರಭುತ್ವವನ್ನು ಎಚ್ಚರಿಸುವ ಕೆಲಸ ಮಾಡಿದ್ದಾರೆ.

## ಆಕರ ಗ್ರಂಥಗಳು

[1] ಕಲಬುರ್ಗಿ ಎಂ.ಎಂ (ಪ್ರ.ಸಂ) - ಬಸವಯುಗದ ವಚನ ಮಹಾಸಂಪುಟ-1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ತೃತೀಯ ಆವೃತ್ತಿ, (ಬೈಬಲ್ ಮುದ್ರಣ ಮಾದರಿ)-2016, ಸಮಗ್ರ ಸಂ. ಸಂಖ್ಯೆ

[2] ಬಸವಣ್ಣನವರ ವಚನಸಂಪುಟ - ಸಂ. ಡಾ.ಎಂ. ಎಂ.ಕಲಬುರ್ಗಿ 1

[3] ಸಂಕೀರ್ಣ ವಚನಸಂಪುಟ : ಎರಡು- ಸಂ. ಡಾ.ಎಸ್.ವಿದ್ಯಾಶಂಕರ 7

[4] ಸಂಕೀರ್ಣ ವಚನಸಂಪುಟ : ನಾಲ್ಕು- ಸಂ. ಡಾ.ವೈ.ಸಿ.ಭಾನುಮತಿ 9